ಕೊಡಿಸಬಹುದು ಅಥವಾ ಇನ್ನು ಯಾವುದಾದರೂ ಸಣ್ಣ ಪುಟ್ಟ ಬೆನಿಫಿಟ್ ಕೊಡಿಸಬಹುದು. ರೈತರ ಅನುಕೂಲಕ್ಕೋಸ್ಕರ ನಿಯಮಗಳನ್ನು ಏನು ಸಡಿಲ ಮಾಡಬಹುದೋ ಅದನ್ನು ಮಾಡಬಹುದು. ಆದ್ದರಿಂದ ಸರ್ಕಾರ ಒಂದು ವಾರದೊಳಗೆ ಸಭೆ ಕರೆದು ಸಂಬಂಧಪಟ್ಟ ಎಲ್ಲರನ್ನೂ ಕರೆದು ಮಂತ್ರಿಗಳು ನಾನು ಎಲ್ಲಾ ಸೇರಿ ಯಾವ ಯಾವ ಏರಿಯಾದಲ್ಲಿ ರೈತರಿಗೆ ಏನೇನು ಅನುಕೂಲಗಳನ್ನು ಮಾಡಿಕೊಡಬಹುದು ಎಂಬ ಬಗ್ಗೆ ಒಂದು ತೀರ್ಮಾನ ಮಾಡುತ್ತೇವೆ.

ಉ) ಇಳಕಲ್‌ನಲ್ಲಿ ಗ್ರಾನೈಟ್ ಲೂಟಿ

+ ಶ್ರೀ ಹೆಚ್.ಎನ್. ನಂಜೇಗೌಡ : ಸನ್ಮಾನ್ಯ ಅಧ್ಯಕ್ಷರೆ, ಸದನ ಸಮಿತಿ ಈಗತಾನೇ ಅಂದರೆ ಹೋದವಾರ ಗಣಿ ಲೂಟಿ ಬಗ್ಗೆ ನೋಡುವುದಕ್ಕೆ ನೇಮಕ ಆಗಿದೆ. ಆದರೂ ಜೆ.ಹೆಚ್. ಪಟೇಲರಿಗೆ ಸಿಟ್ಟು ಬರಬಹುದು ಆಶ್ಚರ್ಯವೂ ಆಗಬಹುದು. ಏನಪ್ಪ, ನಂಜೇಗೌಡರಂಥವರು ಸದನ ಸಮಿತಿ ಗಣಿ ಲೂಟಿ ಬಗ್ಗೆ ರಚನೆಯಾಗಿದ್ದರೂ ಈ ವಿಚಾರ ಎತ್ತುತ್ತಾರಲ್ಲ ಎಂದು. ಅದು ಪ್ರಸ್ತಾವ. ನಾನು ಎತ್ತಬೇಕಾದರೆ ಕಾರಣ ಅಧ್ಯಕ್ಷರೆ, ಇಳಕಲ್ ಗ್ರಾನೈಟ್ ಲೂಟಿಗೆ ಸಂಬಂಧಪಟ್ಟಹಾಗೆ ಅನೇಕ ವಿಚಾರಗಳು ಬಂದವು. ಮೊದಲು ಬಂದಿದ್ದು ಆಗಸ್ಟ್ 2ನೇ ತಾರೀಖು. ನಾಗೇಗೌಡರೇ, ತಮ್ಮ ಗಮನಕ್ಕೆ ಇದು ಬಂದಿದೆಯೋ ಅಥವ ಇಲ್ಲವೋ ಗೊತ್ತಿಲ್ಲ. ಏಕೆಂದರೆ ತಾವು ಆ ಕಮಿಟಿಯಲ್ಲಿದ್ದೀರಿ. ಆಗಸ್ಟ್ 2ಕ್ಕೆ ಒಂದು ಹೇಳಿಕೆ ಬಂತು ಮುಖ್ಯಮಂತ್ರಿಗಳದು. ಅದು ಇಳಕಲ್ ಗ್ರಾನೈಟ್ ಬಗ್ಗೆ ಅದು ಜೆಮ್ಸ್ ಗ್ರಾನೈಟ್ ಬಗ್ಗೆ ಅವರು ಹೇಳುತ್ತಾರೆ; ಪತ್ರಿಕೆಯವರು ಕೇಳುತ್ತಾರೆ, "ಏನು ಸ್ವಾಮಿ, ನಿಮ್ಮ ಪಕ್ಷದ ಮುಖಂಡರ ಫೋಟೋ ಇಟ್ಟುಕೊಂಡು ಅವನು ವ್ಯವಹಾರ ಮಾಡುತ್ತಾನೆ" ಎಂದು. ಸನ್ಮಾನ್ಯ ಮುಖ್ಯಮಂತ್ರಿಗಳು ಹೇಳುತ್ತಾರೆ, "ಮುಖಂಡರ ಫೋಟೋ ಅಲ್ಲ, ಪರಮಾತ್ಮನ ಫೋಟೋ ಇಟ್ಟುಕೊಂಡರೂ ಅವನನ್ನು ಬಲಿ ಹಾಕುತ್ತೇನೆ" ಎಂದು. ಇದನ್ನು ಓದಿದೆವು, ಸುಮ್ಮನಾದೆವು, ಏನೋ ಇರಬಹುದೇನೋ ಕಾರ್ಯಕ್ರಮ ತೆಗೆದುಕೊಳ್ಳುತ್ತಾರೆ ಅಂತ.

11.40 ಎ.ಎಂ.

ಶ್ರೀ ಜೆ.ಹೆಚ್. ಪಟೇಲ್ : ಅಧ್ಯಕ್ಷರೆ ತಾವು ಆಗಲೇ ಒಂದು ಡೈರೆಕ್ಷನ್ ಕೊಟ್ಟಿದ್ದೀರಿ ಈಗಾಗಲೇ ಇದಕ್ಕೆ ಸಂಬಂಧಪಟ್ಟ ಹಾಗೆ ಒಂದು ಕಮಿಟಿ ಇದೆ. ಈಗ ತಾವು ಪುನಃ ಪ್ರಸ್ತಾಪ ಮಾಡುವುದಕ್ಕೆ ವಿಶೇಷ ಕಾರಣ ಏನು?

ಶ್ರೀ ಹೆಚ್.ಎನ್. ನಂಜೇಗೌಡ : ನಾನು ಮೊದಲೇ ಹೇಳಿದ್ದೇನೆ. ನಾನು ತಪ್ಪು ಮಾಡುತ್ತಿದ್ದೇನೆಂದು ಅವರಿಗೆ ಅನ್ನಿಸಬಹುದೆಂದು. ಅದು ನನ್ನದೇ ಒಂದು ರೀತಿಯ ಭಾಷಣ. ನೀವು ಮಾತನಾಡುವ ಹಾಗೆ ಮಾಡುವುದಕ್ಕೆ ನನಗೆ ಬರುವುದಿಲ್ಲವಲ್ಲ. ಅದು ಏನಾಯಿತು ಎಂದರೆ, ಇದು ಏನೋ ಬಗೆಹರಿಯುತ್ತದೆ ಇವರು ಬಲಿಹಾಕುತ್ತಾರೆ. ಮುಖ್ಯಮಂತ್ರಿಗಳೇ ಅಷ್ಟು ಹೇಳಿದ ಮೇಲೆ, ಅದು ಹೇಳಿದ್ದು ನಿಮ್ಮ ಪಕ್ಷದವರು ಫೋಟೋ ಇಟ್ಟುಕೊಂಡು ಅವರು ವ್ಯವಹಾರ ಮಾಡುತ್ತಾ ಇದ್ದಾರೆ ಎಂದು. ಇವರು ಹೇಳಿದರು, ಅವರು ಪರಮಾತ್ಮನ ಫೋಟೋ ಇಟ್ಟುಕೊಂಡರೂ ಬಲಿಹಾಕುತ್ತೇವೆಂದು. ಬಲಿಹಾಕಿರಬೇಕೆಂದು ಅಂದುಕೊಂಡೆವು. ಪುನಃ ೮ನೇ ತಾರೀಖಿನಂದು ಪತ್ರಿಕೆಯಲ್ಲಿ ಬಂತು. ನೀವು ಹೇಳುವ ಪರಮಾತ್ಮನ ಫೋಟೋ ಇಡುವುದಕ್ಕಾಗುವುದಿಲ್ಲ, ಆ ಪರಮಾತ್ಮನನ್ನು ಬಂದೋಬಸ್ತಾಗಿ ಗ್ಲಾಸ್‌ನಲ್ಲಿ ಹಾಕಿ ಇಡಬೇಕಾಗುತ್ತದೆ.

ಶ್ರೀ ವಾಟಾಳ್ ನಾಗರಾಜ : ಮಾನ್ಯ ನಂಜೇಗೌಡರೆ, ಪರಮಾತ್ಮ ಎಂದು ಹೇಳಿದರೆ ಎರಡು ಅರ್ಥ ಆಗುತ್ತದೆ. ಆದರೆ ನೀವು ನನಗೆ ಹೇಳಬಹುದು, ನಮಗೆ

ಅಭ್ಯಾಸ ಇಲ್ಲ, ನೀವು ಏತಕ್ಕೆ ಹೀಗೆ ಮಾತನಾಡುತ್ತೀರಿ ಎಂದು ಕೇಳಬಹುದು ಆದರೂ ನನಗೆ ತಿಳುವಳಿಕೆ ಇದೆ.

ಶ್ರೀ ಹೆಚ್.ಎನ್. ನಂಜೇಗೌಡ : ಪರಮಾತ್ಮನ ಪರಿಚಯ ಇಲ್ಲದವರು ಪರಮಾತ್ಮನ ವಿಷಯ ಮಾತನಾಡಬಾರದು. ಪರಮಾತ್ಮನ ವಿಷಯ ಮಾತನಾಡುವುದಕ್ಕೆ ನನಗೆ ಮತ್ತು ಜೆ.ಹೆಚ್. ಪಟೇಲರಿಗೆ ಬಿಟ್ಟುಬಿಡಬೇಕು.

ಶ್ರೀ ವಾಟಾಳ್ ನಾಗರಾಜ್ : ಅವರಿಬ್ಬರ ಸ್ನೇಹ ಅಪಾರ ಇರುವುದರಿಂದ ಅದರ ಅನುಭವ ಇಲ್ಲದಿದ್ದರೂ ಸಹ ನನಗೆ ವಿಚಾರ ಗೊತ್ತಿದೆ.

ಶ್ರೀ ಹೆಚ್.ಎನ್. ನಂಜೇಗೌಡ : ಆದಾದ ಮೇಲೆ ಅಧ್ಯಕ್ಷರೆ, 6ನೇ ತಾರೀಖು ಬಂತು. ಆದರೂ ನಾನು ಸುಮ್ಮನಾದೆ. ಪೇಪರ್ ಓದಿದಾಗ ಏನೋ ಬಂದಿದೆ. ಮಾಡಿದ್ದಾರೆ ಅಂತ ಹೇಳಿ. ಮೊನ್ನೆ ನಮ್ಮ ಸನ್ಮಾನ್ಯಸಚಿವರಾದಂಥ ಜಿಗಜಿಣಗಿಯವರು ಒಂದು ಹೇಳಿಕೆಯನ್ನು ಕೊಟ್ಟರು ಬಹಳ ನೋವಿನಿಂದ ಆ ಹೇಳಿಕೆಯನ್ನು ಕೊಟ್ಟಿದ್ದಾರೆ. ನಿನ್ನೆ ಮತ್ತು ಇವತ್ತು ಎರಡು ದಿವಸವೂ ಪತ್ರಿಕೆಗಳಲ್ಲಿ ಬಂತು. ಅವರು ಎರಡು ವಿಚಾರವನ್ನು ಪ್ರಾಮುಖ್ಯವಾಗಿ ಹೇಳಿದ್ದಾರೆ. ತಮ್ಮ ಮುಖಾಂತರ ಸಭೆಯ ಗಮನಕ್ಕೆ, ಮುಖ್ಯವಾಗಿ ಜೆ.ಹೆಚ್. ಪಟೇಲರ ಗಮನಕ್ಕೆ ತರುತ್ತಿದ್ದೇನೆ. ಜಿಗಜಿಣಗಿಯವರು ಪತ್ರಿಕೆಯಲ್ಲಿ ಒಂದು ಹೇಳುತ್ತಾರೆ ಅದೇನೆಂದರೆ, "ನನ್ನನ್ನು ಮುಂದೆ ಇಟ್ಟುಕೊಂಡು ರಾಮಕೃಷ್ಣ ಹೆಗಡೆಯವರ ತೇಜೋವಧೆಗೆ ವ್ಯವಸ್ಥಿತ ರೀತಿಯಲ್ಲಿ ಕುತಂತ್ರ ನಡೆದಿದೆ. ಆದರೆ ಹೆಗ್ಗಡೆಯವರ ಚರಿತ್ರ ವಧೆಗೆ ಒಬ್ಬ ದಲಿತ ಮನುಷ್ಯನನ್ನು ಬಳಸಿಕೊಳ್ಳಬಾರದಾಗಿತ್ತು" ಇದು ಒಂದು ಮಾತು ಹೇಳುತ್ತಾರೆ. ಈ ಗ್ರಾನೈಟ್ ಬಗ್ಗೆ ಮಾತನಾಡುತ್ತಾ ಏನು ಹೇಳುತ್ತಾರೆಂದರೆ, "ಸರ್ಕಾರ ವಹಿಸಿಕೊಂಡರೆ ಸಹಸ್ರಾರು ಜನರಿಗೆ ಉಪಯೋಗ ಆದೀತು ಎಂದು ಹೇಳಿದ್ದಾರೆ." ಇನ್ನೊಂದು ಕಾರಣ ಏನು? ಮಂತ್ರಿಗಳೇ ಹೇಳಿಬಿಟ್ಟಿದ್ದಾರಲ್ಲ ಸರ್ಕಾರವೇ ವಹಿಸಿಕೊಂಡು ಬಿಟ್ಟರೆ ಒಳ್ಳೆಯದೆಂದು. ಇಲ್ಲಿ ಗುಟ್ಟು ಆಗಿ ಏನೋ ಉಳಿದುಕೊಂಡಿದೆಯೆಂದು ನನಗೇನೂ ಅನ್ನಿಸುವುದಿಲ್ಲ, ಏಕೆಂದರೆ ಆಡಳಿತ ಪಕ್ಷದ ಪ್ರಭಾವಿ ಲಾಬಿ, ಈ ಜೆಮ್ಸ್ ಕಂಪನಿಯ ಹಿಂದೆ ಇದೆ ಎನ್ನತಕ್ಕಂಥದ್ದು ಗುಟ್ಟಾಗಿ ಉಳಿದುಕೊಂಡಿಲ್ಲ, ನಿಮ್ಮಲ್ಲಿ ಗುಟ್ಟಾಗಿದೆಯೇನೋ ಏನೋ ಗೊತ್ತಿಲ್ಲ, ಆಡಳಿತ ಪಕ್ಷದ ಲಾಬಿಯೇ ಇದೆಯಂತ ಅಧ್ಯಕ್ಷರೆ, ಅದಕ್ಕೆ ಕಾರಣವನ್ನು ನೀವೇ ಹೇಳಬೇಕು. ಯಾರಾದರೂ ಮಂತ್ರಿಗಳ ಅಳಿಯ ಏನಾದರೂ ಇಲ್ಲಿ ಪಾರ್ಟ್‌ನರ್ ಆಗಿದ್ದಾನೋ ಎನ್ನುವುದನ್ನು ಸಹ ಸರ್ಕಾರ ಹೇಳಬೇಕಾಗುತ್ತದೆ. ಇದನ್ನು ಏಕೆ ಹೇಳುತ್ತಿದ್ದೇನೆಂದರೆ, ದೇಶದಲ್ಲಿ ರೂಲ್ ಆಫ್ ಲಾ ಇಲ್ಲ, ಲಾ ಆಫ್ ಜಂಗಲ್ ಆಗಿದೆ. The worst ever heard vulgur show, of the century.

ಅದಕ್ಕೆ ಫೈನಾನ್ಸ್ ಮಾಡಿದಂಥವನು ಈ ಗ್ರಾನೈಟ್‌ನ್ನು ಯಾರು ಇವತ್ತು ಗುತ್ತಿಗೆ ತೆಗೆದುಕೊಂಡು ನಡೆಸುತ್ತಾ ಇದ್ದಾನೆ ಈ ವೀರಮಣಿ ಎನ್ನತಕ್ಕಂಥವನು ಜೆಮ್ಸ್ ಗ್ರಾನೈಟ್‌ನವರ ಹೆಸರು ಹೇಳಬಾರದು. ಮದರಾಸಿನಲ್ಲಿ ನಡೆದಂಥ ಈ ಸೆಂಚುರಿ ವಲ್ಗರ್ಸ್ ಕೋಣೆ ಒಂದು ನೂರು ಕೋಟಿ ರೂಪಾಯಿ ಫೈನಾನ್ಸ್ ಮಾಡಿದ ಅಂತ ಹೇಳುತ್ತಾರೆ. ಅದು ಅಷ್ಟೇ ಆಗಿದ್ದರೆ ಅವನು ಮಾಡಿಕೊಂಡು ಹೋಗಲಿ ಎಂದು ನಾವು ಸುಮ್ಮನಾಗುತ್ತಿದ್ದವು. ಬೆಳ್ಳಿತಟ್ಟೆ ಜೊತೆಗೆ ಇನ್‌ವಿಟೇಷನ್ ಮುಖ್ಯಮಂತ್ರಿಗಳಿಗೆ ಹೋಯಿತು. ಬೆಳ್ಳಿ ತಟ್ಟೆ ಇಲ್ಲದೇ ಇರುವ ಇನ್‌ವಿಟೇಷನ್ ಕೆಲವು ಇದ್ದಾವೆ ಅಂತ ಅವನು ತಂದುಕೊಟ್ಟಂಥ ಬೇರೆಯವರಿಗೆ... ಯಾರ್ಯಾರು ಇದ್ದರು ಎನ್ನುವ ಆ ಮಾತು ಬೇರೆ.

ಅಧ್ಯಕ್ಷರು : ಮಾನ್ಯ ನಂಜೇಗೌಡರೆ, ಅದು ಬೇಡ.

ಶ್ರೀ ಹೆಚ್.ಎನ್. ನಂಜೇಗೌಡ : ಇಲ್ಲ, ಇಲ್ಲ ಅರ್ಥವಾಯಿತು ನನಗೆ ನಾನು ಇದನ್ನು ಏಕೆ ಹೇಳಿದೆ ಎಂದರೆ, ಈಗ ಅವನು ಸಾಗಿಸುತ್ತಿರುವ ಗ್ರಾನೈಟ್‌ನ್ನು ಕರ್ನಾಟಕ ರಾಜ್ಯದಿಂದ ತಂದರೂ ಸಹ ಆಂಧ್ರ ಮುಖಾಂತರ ಮದರಾಸಗೆ ತೆಗೆದುಕೊಂಡು ಹೋಗುತ್ತಾರೆ. ನನಗೆ ಗೊತ್ತಾಗಿರತಕ್ಕಂಥ ಪ್ರಕಾರ ಮೂರೂ ರಾಜ್ಯದ ರಾಜಕಾರಣಿಗಳು ಇದರಲ್ಲಿ ಪಾಲುದಾರರಾಗಿದ್ದಾರೆ. ಈಗ ಇದನ್ನು ಸರ್ಕಾರ ಆದರೂ ಕೂಡಲೇ ವಹಿಸಿಕೊಳ್ಳಲಿ, ಬೇಗನೆ ಇದನ್ನು ವಹಿಸಿಕೊಳ್ಳಬೇಕು. ಗ್ರಾನೈಟ್ ಕ್ವಾರಿಂಗ್‌ನ್ನು ನಿಲ್ಲಿಸಲೇಬೇಕು. ಎರಡನೆಯದು, ಪ್ರಭಾವಿ ಲಾಬಿಗೆ ಮಣಿಯುವುದಿಲ್ಲ ಸರ್ಕಾರ ಅಂತ ಅನ್ನುವುದಿದ್ದರೆ ಸಿಬಿಐ ತನಿಖೆ ಆಗಬೇಕು. ಏಕೆಂದರೆ ಮೂರು ರಾಜ್ಯಗಳ ರಾಜಕಾರಣಿಗಳು ಇದರಲ್ಲಿ ಇರುವುದರಿಂದ ಜೊತೆಗೆ ನಿಮ್ಮ ಮಂತ್ರಿಗಳು ಏನು ಹೇಳಿದ್ದಾರೆ ಅದು ಸರ್ಕಾರ ವಹಿಸಿಕೊಳ್ಳುವುದು ಒಳ್ಳೆಯದು ಎನ್ನತಕ್ಕಂಥದ್ದನ್ನು, ಅದನ್ನು ತಾವು ಏನು ಮಾಡುತ್ತೀರಿ ಎಂಬುದನ್ನು ತಿಳಿಸುವುದು ಒಳ್ಳೆಯದು.

ಶ್ರೀ ವಾಟಾಳ್ ನಾಗರಾಜ್ : ಅಧ್ಯಕ್ಷರೆ, ಈ ಇಳಕಲ್‌ನಲ್ಲಿ ನಡೆದಂಥದ್ದು ಬಹಳ ದೊಡ್ಡ ಹಗರಣ. ಸ್ವಲ್ಪ ಹೆಚ್ಚು ಕಡಿಮೆ ಸುಮಾರು 2 ಸಾವಿರ ಎಕರೆ ಪ್ರದೇಶದಲ್ಲಿ ಗ್ರಾನೈಟ್ ಲೂಟಿ ನಡೆಯುತ್ತಿದೆ. ಈ ವ್ಯವಹಾರದಲ್ಲಿ ಚಕ್ರವರ್ತಿ ದೊರೆ ಈ ವೀರಮಣಿ ಎಂಬ ಮನುಷ್ಯನೇ. ಈಗ ಅವರು ಏನು ಹೇಳಿದರು ಅದು ಸತ್ಯ. ಆದರೆ ಅದನ್ನು ಹೇಳುವುದಕ್ಕೆ ಮುಂಚೆ ಅವರು ಅನೇಕ ವಿಚಾರಗಳನ್ನು ಹೇಳಿದರು. ಯಾರ್ಯಾರಿಗೆ ಹಣಕೊಟ್ಟರು ಅವೆಲ್ಲ ನಡೆದಿರತಕ್ಕಂಥದ್ದು ನೂರಕ್ಕೆ ನೂರರಷ್ಟು ಸತ್ಯ. ಅದರಲ್ಲಿ ಹಿಂದೆ ಮುಂದೆ ಎನ್ನತಕ್ಕಂಥ ಪ್ರಶ್ನೆ ಇಲ್ಲ, ಈ ವೀರಮಣಿ ಎನ್ನತಕ್ಕಂಥವನ್ನು ಕಳೆದ 10 ವರ್ಷಗಳ ಹಿಂದೆ ಕೆಲಸಕ್ಕೆ ಬಾರದ ಒಬ್ಬ ವಕೀಲನಾಗಿ ಬೆಂಗಳೂರಿನಲ್ಲಿ ಕೆಲಸ ಮಾಡುತ್ತಿದ್ದ. ಇವತ್ತು ಸ್ವಲ್ಪ ಹೆಚ್ಚು ಕಡಿಮೆ ಆ ಗ್ರಾನೈಟ್ ಕಲ್ಲಿನಿಂದ ಒಂದು ಸಾವಿರ ಕೋಟಿ ರೂಪಾಯಿಗಳಿಗಿಂತಲೂ ಹೆಚ್ಚು ಸಂಪಾದನೆ ಮಾಡಿದ್ದಾನೆ. ಕಡಿಮೆ ಸಂಪಾದನೆ ಮಾಡಿದ್ದಾರೆ ಎಂದು ನೀವು ತಿಳಿದುಕೊಳ್ಳಬೇಡಿ. ನಾನು ತಮಗೆ ಏಕೆ ಹೇಳುತ್ತಿದ್ದೇನೆಂದರೆ ಈ ಮದ್ಯೆ 16 ವರ್ಷಗಳಿಂದ ಈ ಸದನದಲ್ಲಿ ಒಂದು ಸಮನೆ ಈ ಬಗ್ಗೆ ನಾನು ಹೇಳಿದ್ದೇನೆ. ಇಳಕಲ್ ಪ್ರದೇಶ ಸಂಪೂರ್ಣವಾದಂಥ ಒಂದು ರೀತಿಯಲ್ಲಿ ನಮ್ಮ ಕರ್ನಾಟಕದ ಇತಿಹಾಸವನ್ನೇ ಪ್ರತಿನಿಧಿಸತಕ್ಕಂಥ ಪ್ರದೇಶ; ಆ ಪ್ರದೇಶದಿಂದ ತೆಗೆದಿರತಕ್ಕಂಥ ಕಲ್ಲನ್ನು ಇನ್ನೂ ಒಂದು ಲಕ್ಷ ಸಾವಿರ ವರ್ಷಗಳಲ್ಲಿ ಆ ಕಲ್ಲನ್ನು ಮತ್ತೆ ಮಾಡುತ್ತೇವೆ ಎಂದು ಹೇಳಿದರೆ, ಇದು ಸಾಧ್ಯವಿಲ್ಲ, ಅಂಥ ಪರಿಸ್ಥಿತಿ ಅಲ್ಲಿ ನಿರ್ಮಾಣವಾಗಿದೆ ಅಧ್ಯಕ್ಷರೆ. ಇದಕ್ಕೆ ನಾನು ತಮಗೆ ಹೇಳುತ್ತೇನೆ. ಇದು ನಮ್ಮ ಸಮಿತಿಯ ವ್ಯವಸ್ಥೆಗೆ ಬರುತ್ತದೆಯೋ ಬಿಡುತ್ತದೆಯೋ ಆ ಪ್ರಶ್ನೆ ಬೇರೆ. ಆ ಮೇಲೆ ನಾವು ಯೋಚನೆ ಮಾಡುತ್ತೇವೆ. ಈ ಹಗರಣದ ಬಗ್ಗೆ ಸಮಗ್ರವಾದಂಥ ತನಿಖೆ ಆಗಬೇಕು. ಮತ್ತು ಈ ವೀರಮಣಿ ಕಲ್ಲನ್ನು ತೆಗೆದು ಮದರಾಸು ನಗರದಲ್ಲಿ ಒಂದು ಕಡೆ ಇಟ್ಟಿದ್ದಾನೆ. ಹಾಗೆ ಇಟ್ಟಿರತಕ್ಕಂಥ ಆ ಕಲ್ಲಿನ ಅಂದಾಜು ಸ್ವಲ್ಪ ಹೆಚ್ಚು ಕಡಿಮೆ ಎರಡು ಸಾವಿರ ಕೋಟಿ ರೂಪಾಯಿಗಳಿಗಿಂತ ಹೆಚ್ಚಾಗುತ್ತದೆ. ಇದರ ಬಗ್ಗೆ ಸಮಗ್ರವಾದಂಥ ಪರಿಣಾಮಕಾರಿಯಾದಂಥ ತನಿಖೆಗೆ ಆಗ್ರಹ ಮಾಡಬೇಕು ಎಂದು ತಮ್ಮ ಮೂಲಕ ನಾನು ಅತ್ಯಂತ ಕಳಕಳಿಯಿಂದ ಮನವಿ ಮಾಡುತ್ತಿದ್ದೇನೆ. ಈ ಪ್ರದೇಶವೇ ಒಂದು ರೀತಿ ಭಯಭೀತಿಯ ವಾತಾವರಣದಲ್ಲಿದೆ. ಈ ವ್ಯಕ್ತಿ ಇಡೀ ಬಿಜಾಪುರ ಜಿಲ್ಲೆಯನ್ನೇ ಕೊಂಡುಕೊಳ್ಳುತ್ತೇನೆ ಎನ್ನತಕ್ಕಂಥ ಒಂದು ಕೆಟ್ಟ ಪ್ರವೃತ್ತಿಗೆ ಹೋಗಿದ್ದಾರೆ. ಮತ್ತು ಯಾರನ್ನು, ಮುಖ್ಯಮಂತ್ರಿಗಳಾಗಲಿ, ಪ್ರಧಾನ ಮಂತ್ರಿಗಳಾಗಲಿ, ಕೇಂದ್ರದ ಮಂತ್ರಿಗಳಾಗಲಿ ಎಲ್ಲರೂ ಅವರಿಗೆ ಒಂದು ರೀತಿ ಎಂದರೆ ಎಲ್ಲರೂ ನನಗೆ ಬೇಕು ಅನ್ನುವ ರೀತಿಯಲ್ಲಿ ಛಾತಿ, ಕೆಟ್ಟ ಭಾವನೆ ಆ ವ್ಯಕ್ತಿಯಲ್ಲಿ ನಿರ್ಮಾಣವಾಗಿದೆ.

ನಾನು ತಮ್ಮ ಮುಂದೆ ಏಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ ಈ ನಿಸರ್ಗ ಸಂಪತ್ತನ್ನು ಉಳಿಸಿಕೊಳ್ಳುವುದಕ್ಕೋಸ್ಕರವಾಗಿ ಉಪ ಮುಖ್ಯಮಂತ್ರಿಗಳಲ್ಲಿ ನಾನು ಕಳಕಳಿಯಿಂದ ಪ್ರಾರ್ಥನೆ ಮಾಡಿಕೊಳ್ಳುತ್ತಿದ್ದೇನೆ. ನಾವು ಏನೇ ತನಿಖೆ ಮಾಡಬಹುದು, ವರದಿ ಕೊಡಬಹುದು, ಯಾರ್ಯಾರು ಇದರಲ್ಲಿ ಸಿಕ್ಕಿದ್ದಾರೆ ಎನ್ನತಕ್ಕಂಥದ್ದು ಒಂದು ವಾದ. ಆದರೆ ಈ ಕಲ್ಲನ್ನು ಇದುವರೆಗೆ ತೆಗೆದಿದ್ದಾರಲ್ಲ ಇದರ ಬಗ್ಗೆ ಮಾನ್ಯ ಉಪ ಮುಖ್ಯಮಂತ್ರಿಗಳಲ್ಲಿ ಕೇಳಿಕೊಳ್ಳುವುದೇನೆಂದರೆ ಇದರಲ್ಲಿ ಎಷ್ಟು ನಷ್ಟ ಆಗಿದೆ? ನಿಸರ್ಗದ ಮೇಲೆ ಎಷ್ಟು ಪರಿಣಾಮ ಆಗಿದೆ? ಇದರ ಲೆಕ್ಕ ಇವತ್ತು ಕೂಡ ಭೂವಿಜ್ಞಾನ ಇಲಾಖೆಯಲ್ಲಿ ಇಲ್ಲ ಎಂದು ನಾನು ತಮಗೆ ಹೇಳುತ್ತೇನೆ. ಬನ್ನಿ, ಕೆಲವು ಪ್ರದೇಶಕ್ಕಾದರೂ ಹೋಗಿಬರೋಣ? ಕಣ್ಣೀರು ಬರುತ್ತದೆ. ತಮ್ಮ ಮೂಲಕ ಹೇಳುತ್ತೇನೆ ಇದರಿಂದ ಬರತಕ್ಕಂಥ ಏನು ರಾಜಧನ ಇದೆ, ಈ ರಾಜಧನದಿಂದ ಸರ್ಕಾರದ ಅಭಿವೃದ್ಧಿ ಕಾರ್ಯಗಳಿಗೆ ಅನುಕೂಲವಾಗುತ್ತದೆ ಎನ್ನತಕ್ಕಂಥದ್ದನ್ನು ನಿಲ್ಲಿಸಿ, ಇದರಿಂದ ಎಷ್ಟೇ ಕೋಟಿ ಹಣಬಂದರೂ ಸಂಪೂರ್ಣವಾಗಿ ನಿಲ್ಲಿಸಿ.

ಶ್ರೀ ಜೆ.ಹೆಚ್. ಪಟೇಲ್ : ತೆರಿಗೆ ವಿಷಯ ಅಥವಾ ಇದರಿಂದ ಎಷ್ಟು ನಷ್ಟವಾಗಿದೆ ಎಷ್ಟು ಅಮಾಲ್ಯವಾದ ಸಂಪತ್ತು ಹೋಗಿದೆ ಅದನ್ನು ತರಿಸೋಣ. ಇವತ್ತು ಇಲ್ಲಿ ಇದನ್ನು ಏಕೆ ಪ್ರಸ್ತಾಪ ಮಾಡಬೇಕು ಹೇಳಿ.

ಶ್ರೀ ವಾಟಾಳ್ ನಾಗರಾಜ್ : ಆದ್ದರಿಂದ ನಾನು ಏನು ಹೇಳುತ್ತಿದ್ದೇನೆಂದರೆ ತಕ್ಷಣ ಕಲ್ಲನ್ನು ತೆಗೆಯುವುದನ್ನು ರಾಜ್ಯಾದ್ಯಂತ ಕೂಡಲೇ ನಿಲ್ಲಿಸಿ ಇದನ್ನು ಸಮಗ್ರವಾದ ತನಿಖೆಗೆ ಒಪ್ಪಿಸಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

+ ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಸನ್ಮಾನ್ಯ ಅಧ್ಯಕ್ಷರೆ, ಈಗ ಮಾನ್ಯ ನಂಜೇಗೌಡರು ನಮ್ಮ ಇಳಕಲ್ ನಗರದಲ್ಲಿ ಮತ್ತು ಇಳಕಲ್ ತಾಲ್ಲೂಕಿನಲ್ಲಿ ಗ್ರಾನೈಟ್ ತೆಗೆಯುತ್ತಿರುವ ಬಗ್ಗೆ ಏನು ಪ್ರಸ್ತಾಪ ಮಾಡಿದ್ದಾರ ಅದರ ಬಗ್ಗೆ ಅವರು ಸ್ಪಷ್ಟವಾಗಿ ಹೇಳಿದ್ದಾರೆ. ಮುಖ್ಯಮಂತ್ರಿಗಳು ಯಾವ ರೀತಿಯಾಗಿ ಹೇಳಿಕೆ ಕೊಟ್ಟರು, ಮತ್ತು ಅಲ್ಲಿರತಕ್ಕಂಥ ಸ್ಥಳೀಯ ಮಂತ್ರಿಗಳು ಯಾವ ರೀತಿಯಾಗಿ ಅದನ್ನು ಡಿಫೆಂಡ್ ಮಾಡಿಕೊಂಡರು ಎನ್ನತಕ್ಕಂಥದ್ದರ ಬಗ್ಗೆ ಹೇಳಿದ್ದಾರೆ. ಅದು ಒಂದು ವಿಚಾರ. ಎರಡನೆಯದು ಏನೆಂದರೆ ಈ ಗ್ರಾನೈಟ್ ಲೂಟಿಯಲ್ಲಿ ವೀರಮಣಿ ಎನ್ನತಕ್ಕಂಥ ಜೆಮ್ಸ್ ಗ್ರಾನೈಟ್‌ನ ಮ್ಯಾನೇಜಿಂಗ್ ಡೈರೆಕ್ಟರವರು ಇಲ್ಲಿ ಹಣವನ್ನು ಸಂಪಾದನೆ ಮಾಡಿ ಈ "ಸೆಂಚುರಿಯ ಒಂದು ದೊಡ್ಡ ವಲ್ಗರ್ಸ್ ಶೋ ಅಂದರೆ ಆ ರೀತಿಯಾಗಿ ನಡೆದಂಥ ಒಂದು ಲಗ್ನಕ್ಕೆ ಇಲ್ಲಿ ಲೂಟಿ ಮಾಡಿ ಅಲ್ಲಿ ಅವರಿಗೆ ಸಹಾಯ ಮಾಡತಕ್ಕಂಥ ಕೆಲಸವನ್ನು ಕೂಡ ಅವರು ಮಾಡುತ್ತಿದ್ದಾರೆ. ಅದಕ್ಕೆ ಈ ಗ್ರಾನೈಟ್ಸ್ ಇವತ್ತು ಏನು ಇಲ್ಲಿಂದ ಅಲ್ಲಿಗೆ ಸಾಗಾಣಿಕೆ ಮಾಡುತ್ತಿದ್ದಾನೆ, ಅಂದರೆ ಮದರಾಸ್ ಪೋರ್ಟ್‌ನವರಿಗೆ, ಅಲ್ಲಿಂದ ಅವರ ಮುಖಾಂತರವೇ ಅವನು ಎಕ್ಸ್‌ಪೋರ್ಟ್ ಮಾಡುತ್ತಿದ್ದಾನೆ ಎನ್ನತಕ್ಕಂಥ ಮಾತು ನಮ್ಮ ಮುಂದೆ ಇದೆ. ನಾವು ಇದರ ಬಗ್ಗೆ ಹಿಂದೆ ಸಮಿತಿ ಮಾಡಿದ್ದೇವೆ ಇದಕ್ಕೆ ನಾಗೇಗೌಡರು ಅಧ್ಯಕ್ಷರಾಗಿದ್ದಾರೆ. ಇದು ಅವರ ವ್ಯಾಪ್ತಿಗೆ ಬರತಕ್ಕಂಥದ್ದು ಅಲ್ಲ, ಅದಕ್ಕಾಗಿ ನಂಜೇಗೌಡರು ಸಿಬಿಐ ವಿಚಾರಣೆ ಮಾಡಿ ಎಂದು ಕೇಳಿದರು. ಅದಕ್ಕೆ ನನ್ನದೂ ಕೂಡ ಸಹಮತ ಇದೆ. ಏಕೆಂದರೆ ಇದು ಸುಮಾರು ಮೂರು ರಾಜ್ಯಗಳಲ್ಲಿ ನಡೆದಂಥ ವ್ಯವಹಾರವಾದ್ದರಿಂದ ಇದನ್ನು ಸಮಿತಿ ನೇರವಾಗಿ ತನಿಖೆ ಮಾಡುವುದಕ್ಕೆ ಸಾಧ್ಯವಿಲ್ಲ, ಆ ಕೆಲಸವನ್ನು ಸಮಿತಿಗೆ ರೆಫರ್ ಮಾಡಿರಬಹುದು. ಮೊನ್ನೆ ದಿವಸ ಅದೇ ವಿಷಯವನ್ನು ಅವರು ಪ್ರಸ್ತಾಪ ಮಾಡಿದ್ದಾರೆ. ಈಗಲೂ ಕೂಡ ಅದರ ಸಾಗಾಣಿಕೆ ಆಗುತ್ತಿದೆ ಎಂಬುದನ್ನು ಶ್ರೀಮಾನ್ ನಾಗೇಗೌಡರು ಇಲ್ಲಿ ಹೇಳಿದ್ದಾರೆ. ಆ ಸಮಿತಿಯವರು ಕೆಲಸವನ್ನು ಪ್ರಾರಂಭ ಮಾಡಿದ್ದಾರೆ.

ಅವರು ಇದರ ಬಗ್ಗೆ ಕೆಲವು ಸಲಹೆ ಸೂಚನೆಗಳನ್ನು ತೆಗೆದುಕೊಳ್ಳುತ್ತಿದ್ದಾರೆ. ಅದೇ ಟೈಮಿನಲ್ಲಿ ಕೆಲವು ಜನ ಲಾರಿಯಲ್ಲಿ ಸಾಗಾಣಿಕೆ ಮಾಡುತ್ತಿದ್ದಾರೆಂಬುದನ್ನು ನಿನ್ನೆ ಅವರು ಪ್ರಸ್ತಾಪ ಮಾಡುವಾಗ ತಿಳಿಸಿದ್ದಾರೆ. ಅದಕ್ಕಾಗಿ ನಿಯಮ 237ರ ಕೆಳಗೆ ನಾನು ಕೇಳಿಕೊಳ್ಳತಕ್ಕಂತಹದ್ದು ಇಷ್ಟೆ; 236 ನಿಯಮ ಏನು ಹೇಳುತ್ತದೆಂದರೆ, Power of Speaker to give direction on a point of procedure or otherwise:

"(1) The Speaker may from time to time issue such directions to the Chairman of the Committee as he may consider necessary for regulating its procedure and the organisation of its work.

(2) If any doubt arises on any point of procedure or otherwise, the Chairman may, if he thinks fit, refer the point to the Speaker whose decision shall be final."

ಆದರೆ ನಿನ್ನೆ ಆ ಸಮಿತಿಯ ಅಧ್ಯಕ್ಷರು ಒಂದು ಡೌಟ್ ಎಕ್ಸ್‌ಪ್ರೆಸ್ ಮಾಡಿದರು. ಈಗ ಕಡೆ ನಮ್ಮ ಸಮಿತಿಯ ಕಾರ್ಯಾಚರಣೆ ನಡೆದಿದೆ, ಆ ಕಡೆ ಲಾರಿಗಳಲ್ಲಿ ಗ್ರಾನೈಟ್ ಹೋಗುತ್ತಲೇ ಇದೆ, ಇದನ್ನು ಹೇಗೆ ನಿಲ್ಲಿಸುವುದು? ಇದಕ್ಕೆ ತಾವು ಕೂಡ ನೇರವಾಗಿ ಡೈರೆಕ್ಷನ್ ಕೊಡುವುದಕ್ಕೆ ಬರುವುದಿಲ್ಲ. ಛೇರ್ಮನ್‌ರವರು ನೇರವಾಗಿ ಡೈರೆಕ್ಷನ್ ಕೊಟ್ಟಿಲ್ಲ. ಅದಕ್ಕೆ ಅವರು ನಿಮಗೆ ರೂಲ್ ಕೆಳಗೆ ಈಗಾಗಲೇ ರಿಕ್ವೆಸ್ಟ್ ಮಾಡಿಕೊಂಡಿದ್ದಾರೆ. ಅದನ್ನು ನಿಲ್ಲಿಸಬೇಕು ಅಂತ ಹೇಳಿ. ಡೈರೆಕ್ಷನ್ ಕೊಡಬೇಕು. ಅದಕ್ಕೆ ಪುನಃ ಅವರಿಗೆ ಕೇಳುತ್ತೇವೆ, ಇವರಿಗೆ ಕೇಳುತ್ತೇವೆ ಎನ್ನುವ ರೀತಿಯಲ್ಲಿ ಆಗಬಾರದು. ಅದು ಒಂದು. ಎರಡನೆಯದು ಈಗ ಏನು ಇಳಕಲ್‌ನಲ್ಲಿ ನಡೆದಿದೆ ಅದರ ಬಗ್ಗೆ ಸಿ.ಬಿ.ಐ. ವಿಚಾರಣೆ ಆಗಲೇಬೇಕು. ಇವೆರಡೂ ಕೂಡ ಬೇರೆ ಬೇರೆ ವಿಷಯಗಳಿವೆ. ಒಂದು ಕಡೆ ನಿಲ್ಲಿಸತಕ್ಕಂತಹದ್ದು. ಇನ್ನೊಂದು ಸಿ.ಬಿ.ಐ. ವಿಚಾರಣೆ ಮಾಡಿಸತಕ್ಕಂತಹದ್ದು. ಅದರೊಳಗೆ ಗೊತ್ತಾಗುತ್ತದೆ. ಏಕೆಂದರೆ ಇದರಲ್ಲಿ ಯಾರ್ಯಾರು ಇದ್ದಾರೆ, ಮಂತ್ರಿಗಳು ಇದ್ದಾರೋ? ಎಂ.ಎಲ್.ಎ.ಗಳು ಇದ್ದಾರೋ, ಮುಖಂಡರುಗಳು ಇದ್ದಾರೋ? ಅಥವಾ ಮತ್ತೆ ಯಾರಾದರೂ ಪ್ರಭಾವಿ ಸೋಷಿಯಲ್ ವರ್ಕರ್ಸ್ ಇದ್ದಾರೋ? ಅದೆಲ್ಲವೂ ಕೂಡ ಹೊರಗೆ ಬರುತ್ತದೆ. ಅದಕ್ಕಾಗಿ....

ಅಧ್ಯಕ್ಷರು : ಪ್ರಭಾವಿ ಅಂಟಿ ಸೋಷಿಯಲ್ ವರ್ಕರ್.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಆಂಟಿ ಸೋಷಿಯಲ್ ವರ್ಕರ್ ಅಂತ ಹೇಳಿ, ಅಥವಾ ಸೋಷಿಯಲ್ ವರ್ಕರ್‌ಅಂತ ಹೇಳಿ. ಒಪ್ಪಿಕೊಳ್ಳುತ್ತೇನೆ. ದಯವಿಟ್ಟು ಇದಕ್ಕೆ ಅವಕಾಶ ಮಾಡಿ ಕೊಡಬೇಕು. ಇಲ್ಲ ನೇರವಾಗಿ ಇದನ್ನು ಸಿ.ಬಿ.ಐ.ಗೆ. ರೆಫರ್ ಮಾಡಿ ಬಿಡುತ್ತೇವೆ ಎಂದು ಹೇಳಿದರೆ ನಮ್ಮದೇನೂ ಅಭ್ಯಂತರ ಇಲ್ಲ.

ಶ್ರೀ ಕಾಗೋಡು ತಿಮ್ಮಪ್ಪ : ಮಾನ್ಯ ಅಧ್ಯಕ್ಷರೆ, ಇದೊಂದು ಬಹಳ ಪ್ರಾಮುಖ್ಯವಾದ ವಿಚಾರ.

ಅಧ್ಯಕ್ಷರು : ನೀವು ಯಾವಾಗ ಬಂದಿರಿ.

ಶ್ರೀ ಕಾಗೋಡು ತಿಮ್ಮಪ್ಪ : ಮಾನ್ಯ ಉಪ ಮುಖ್ಯಮಂತ್ರಿಗಳು ಉತ್ತರ ಹೇಳುವುದಕ್ಕಿಂತ ಮುಂಚಿತವಾಗಿ ಈ ಒಂದು ಪ್ರಶ್ನೆ ಬಹಳ ಪ್ರಾಮುಖ್ಯವಾದುದು. ಇದೊಂದು ಕಲ್ಲಿನ ಖನಿಜ ಸಂಪತ್ತು. ಏನೆಂದರೆ. ಇದು ಅನೇಕ ಸಾರಿ ಚರ್ಚೆಗೂ ಬಂದಿದೆ. ಒಂದು ಮುಖ್ಯವಾದ ವಿಷಯ ಏನೆಂದರೆ, ಈಗ ನಾವು ತಿಳಿದುಕೊಂಡ ಪ್ರಕಾರ ಸರ್ಕಾರದ ಕ್ಷೇತ್ರದಲ್ಲಿರತಕ್ಕ ಆ ಖನಿಜ ಸಂಪತ್ತು ಸರ್ಕಾರಕ್ಕೆ ಸೇರಿರತಕ್ಕಂತಹದ್ದು. ಖಾಸಗಿ ಜಮೀನಿನಲ್ಲಿ ಅಂತಹ ಸಂಪತ್ತು ಇದ್ದರೂ ಕೂಡ ಕಂದಾಯ ಇಲಾಖೆಯ

ಕಾನೂನು ಪ್ರಕಾರ ಅದು ಸರ್ಕಾರಕ್ಕೆ ಸೇರಿರತಕ್ಕ ವಸ್ತು.ಹಾಗಾಗಿ ಇದೆಲ್ಲಾ ಇದ್ದರೂ ಕೂಡ ಖಾಸಗಿ ಜಮೀನಿನಿಂದಲೂ ಕೂಡ ಸಾಗಾಣಿಕೆಯಾಗುತ್ತಿದೆ. ಸರ್ಕಾರಕ್ಕೆ ಸೇರಿರತಕ್ಕ ಜಮೀನಿನಿಂದಲೂ ಇವತ್ತು ಸಾಗಾಣಿಕೆಯಾಗುತ್ತದೆ. ಶ್ರೀಮಾನ್ ವಾಟಾಳ್ ನಾಗರಾಜ್‌ರವರು ಹೇಳಿದ ರೀತಿಯಲ್ಲಿ ಇದೊಂದು ಅಮೂಲ್ಯವಾದಂತಹ ವಸ್ತು. ಈ ವಸ್ತು ಭೂಮಿ ಒಳಗೆ ಇದ್ದರೂ ಕೂಡ ಅದಕ್ಕೆ ಬೆಲೆ ಬರುವುದಿಲ್ಲ.

ಏಕೆಂದರೆ ಚಿನ್ನ ಭೂಮಿಯೊಳಗೆ ಇದ್ದರೆ ಅದರ ಬೆಲೆ ಗೊತ್ತಾಗುವುದಿಲ್ಲ. ಹೊರಗೆ ತೆಗೆದು ಚಿನ್ನ ಮಾಡಿದರೆ, ಅದಕ್ಕೆ ಬೆಲೆ ಬರುತ್ತದೆ. ಈ ಗಣಿ ಸಂಪತ್ತನ್ನು ಉಪಯೋಗ ಮಾಡಿಕೊಂಡರೂ ಅದು ಒಂದು ಸಂಪತ್ತಾಗಿ ಪರಿವರ್ತನೆಯಾಗುತ್ತದೆ. ಅದರ ಇದರ ಹೆಸರಿನಿಂದ ಲೂಟಿಯಾಗಿ ಬೇರೆಯವರಿಗೆ ಲಾಭವಾಗುವುದಾದರೆ, ಇದನ್ನು ನಿಲ್ಲಿಸಬೇಕಾದಂಥ ಅಗತ್ಯ ಜರೂರಾಗಿದೆ. ಇದರಿಂದ 10 ಕೋಟಿ, 20 ಕೋಟಿ ರೂಪಾಯಿ ರಾಯಲ್ಟಿ ಮುಖಾಂತರ ಆದಾಯ ಸರ್ಕಾರಕ್ಕೆ ಬರಬಹುದು. ನಮ್ಮ ರಾಜ್ಯದಲ್ಲಿರತಕ್ಕ ಖನಿಜ ಸಂಪತ್ತು ಶಾಶ್ವತವಾಗಿ ರಾಜ್ಯದಲ್ಲೇ ಉಳಿಸಿಕೊಳ್ಳತಕ್ಕ ಪ್ರಯತ್ನದಿಂದಾಗಿ, ಏನಾದರೂ ಸಾಮೂಹಿಕವಾಗಿ ಇದನ್ನು ತೆಗೆಯುವುದನ್ನು ಮತ್ತು ಸಾಗಾಣಿಕೆ ಮಾಡತಕ್ಕ ಕೆಲಸವನ್ನು ರದ್ದು ಮಾಡುವುದಕ್ಕೆ ಸರ್ಕಾರ ಏಕೆ ಯೋಚನೆ ಮಾಡಬಾರದು?

ಶ್ರೀ ಜೆ.ಎಚ್. ಪಟೇಲ್ : ಇಡೀ ವಿಷಯಕ್ಕೆ ಸಂಬಂಧಪಟ್ಟಂತೆ ವಿಚಾರ ಮಾಡುವುದಕ್ಕೋಸ್ಕರ ಇಡೀ ಸದನದ ಸಮಯ ಬೇಡ ಅಂತ ಹೇಳಿ, ಸದನದ ಸಮಿತಿಯನ್ನು ಮಾಡಿದ್ದೇವೆ. ಆ ಸಮಿತಿಯ ವಿಚಾರಣಾ ಪರಿಧಿಯಲ್ಲಿ ಏನೇನು ವಿಷಯಗಳು ಬರಬೇಕು ಅನ್ನುವುದು ಬೇರೆ ಇದೆ. ಆದರೆ ಮಾನ್ಯ ಸದಸ್ಯರಾದ ನಂಜೇಗೌಡರು ಹೊಸ ಅಂಶ ಏನು ತಂದರು ಅಂದರೆ ಇಲ್ಲಿ ನಮ್ಮ ಸರ್ಕಾರದ ಒಬ್ಬ ಮಂತ್ರಿ ಹೇಳಿಕೆ ನೀಡಿರುವುದರ ಬಗ್ಗೆ ಮತ್ತು ಸರ್ಕಾರದ ಪಕ್ಷದಲ್ಲೋ ಅಥವಾ ಸರ್ಕಾರದಲ್ಲೋ ಯಾರೋ ಈ ಲಾಬಿಗೆ ಮಣಿದಿದ್ದಾರೆ ಎನ್ನುವ ಅರ್ಥ ಬರುವ ಹಾಗ ಪತ್ರಿಕೆಯಲ್ಲಿ ಬಂದಿದೆ ಅಂತ ಅವರು This was the new point which they wanted to discuss. ನಾನು ಅದಕ್ಕೆ ಹೇಳುವುದು ಮಾನ್ಯ ರಮೇಶ್ ಜಿಗಜಿಣಗಿಯವರು ಬಿಜಾಪುರದಲ್ಲಿ ಕೊಟ್ಟಿರತಕ್ಕ ಹೇಳಿಕೆ ಅದು ಸರ್ಕಾರದ ಪರ ಹೇಳಿಕೆ ಅಂತ ಅಲ್ಲ, ಯಾರು ಅವರ ಹೆಸರನ್ನು ಇದರೊಳಗೆ ಸೇರಿಸುವುದಕ್ಕೆ ಪ್ರಯತ್ನ ಮಾಡುತ್ತಾರೆ ಅಂಥವರಿಗೆ ಅವರು ಉತ್ತರ ಹೇಳಿದ್ದಾರೆ ಅವರು ಮೊನ್ನೆ ಬೆಂಗಳೂರಿಗೆ ಬಂದ ತಕ್ಷಣ ನನ್ನನ್ನು ಭೇಟಿಯಾಗಿ ಅಲ್ಲಿ ಹೀಗೀಗೆ ಆಯಿತು. ಬಹಳ ಒತ್ತಾಯ ಮಾಡಿದರು, ನಿಮ್ಮ ಹೆಸರನ್ನೇ ನೇರವಾಗಿ ಸೂಚಿಸದೆ ಇದ್ದರೂ ಆ ತರಹ ಬರುವ ಹಾಗೆ ಮಾಡಿದ್ದಾರೆ, ಇದು ಮಿಸ್ಚೀಫ್ ಆಗಿದೆ, ಅದಕ್ಕೋಸ್ಕರ ನಾನು ಡಿನೇಮಾಡಿದ್ದೇನೆ ಅಂತ ಹೇಳಿದ್ದಾರೆ. ಅದರೊಳಗೆ ಯಾರೋ ಮಂತ್ರಿಗಳ ಅಳಿಯಂದಿರು ಇದ್ದಾರೆ ಹಾಗೆ ಹೀಗೆ ಅಂತ. ಅದು

ಅದು ಯಾವ ಕಾಲದ ಮಂತ್ರಿಗಳಿಗೆ ಎಷ್ಟೆಷ್ಟು ಜನ ಅಳಿಯಂದಿರು ಇದ್ದರು ಎಂಬ ಲೆಕ್ಕ ಇನ್ನೂ ನನಗೆ ಗೊತ್ತಿಲ್ಲ, ಅದು ಯಾರೂ ಇದ್ದಾರೋ ಬಿಟ್ಟಿದ್ದಾರೋ? ಈಗಂತೂ ಸರ್ಕಾರದ ಗಮನದಲ್ಲಿ ಯಾರೋ ಸರ್ಕಾರಕ್ಕೆ ಸಂಬಂಧಪಟ್ಟ ಜನ ಅದರೊಳಗೆ ಇಲ್ಲ. ಇರಲಿಕ್ಕೂ ಸಾಧ್ಯವೂ ಇಲ್ಲ. ಮೇಲಾಗಿ ಆ ವಲ್ಲಶೋ ಅತ್ಯಂತ ಅಸಹ್ಯಕರವಾದ ಶ್ರೀಮಂತಿಕೆಯ ವಿಜೃಂಬಣೆ ಏನಾಯಿತು ಅದಕ್ಕೆ ಅವರು ದುಡ್ಡುಕೊಟ್ಟಿದ್ದಾರೆ ಅಂತ ಯಾವ ವ್ಯಕ್ತಿ ದುಡ್ಡು ಕೊಟ್ಟಿದ್ದಾರೆ ಅಂತ ಹೇಳುತ್ತಾರೋ, ಯಾವ ವ್ಯಕ್ತಿ ದುಡ್ಡು ಕೊಟ್ಟಿದ್ದಾರೆ ಅಂತ ಹೇಳುತ್ತಾರೋ, ನಿಜ ಅದು. ಅವರು ಅಸಹ್ಯಕರವಾದ ವಿಜೃಂಬಣೆ ಮಾಡಿರುವುದು ಈ ಶತಮಾನದಲ್ಲಿ ತೋರಿಸುವಂತಹ ವೈಲ್ಗಾರಿಟಿ. ಆದರೆ ಅವರು ದುಡ್ಡಿನಿಂದ ಅದನ್ನು ಮಾಡಿದರೋ ಇದನ್ನು ಬಿಟ್ಟಿದ್ದಾರೋ ಅದು

ನನಗೆ ಗೊತ್ತಿಲ್ಲ, ಆ ಮನುಷ್ಯ ಈ ವ್ಯವಹಾರದಲ್ಲಿದ್ದಾರೆ, ಇದರಿಂದ ಅವರಲ್ಲಿರತಕ್ಕ ನಾನಾ ರೀತಿಯಲ್ಲಿ ಉಪಯೋಗ ಮಾಡುತ್ತಾರೆ.ಅದೇ ರೀತಿ ನಾನು ಕೇಳಿದ್ದುದು ಇದು. ನಮ್ಮ ರಾಜ್ಯದಲ್ಲಿ ಅವರು ನಮ್ಮ ಪಕ್ಷವನ್ನು ಕೆಡಿಸುವುದಕ್ಕೆ ಓಡಾಡುತ್ತಿದ್ದಾರೆ ಎಂದು ಕೇಳಿದ್ದೇನೆ. ಆದರೆ ಇಲ್ಲಿ ಈ ತರಹ ಕೆಡುವವರು ಯಾರೂ ಇಲ್ಲ ಅವರಲ್ಲಿರತಕ್ಕ ವಲ್ನರ್‌ಮನಿ, ಅಥವಾ ಅವರಲ್ಲಿರತಕ್ಕ ಯಾವುದೇ ಶಕ್ತಿ ಇದ್ದರೆ. ಅದಕ್ಕೆ ಸಮಿತಿ ತನಿಖೆ ಮಾಡಲಿ, ಅದರ ಮೊದಲು ಎಲ್ಲವನ್ನೂ ಸರ್ಕಾರ ವಹಿಸಿಕೊಳ್ಳಲಿ ಎನ್ನುವ ಸೂಚನೆ ಬಂತು. ಅದನ್ನೂ ನೋಡೋಣ, ಸಮತಿ ವರದಿ ಏನು ಬರುತ್ತದೆಯೋ ನೋಡೋಣ. ಈಗ ತಾವು ಎಲ್ಲ ಹಿಂದೆ ಸರ್ಕಾರ ನಡೆಸಿದ್ದೀರಿ ಖಾಸಗಿ ಲೈಸನ್ಸ್‌ನವರು ಇವತ್ತು ಸಾಗಿಸುತ್ತಿದ್ದರೆ, if his licence is valid, how can we stop it? ಈ ಎಲ ಕೆಲವು ಸಮಸ್ಯೆಗಳು ಬರುತ್ತವೆ. I agree with you. ಈ ತರಹದ ನೋಡುವುದಕ್ಕೆ ಬಹಳ ಶ್ರೀಮಂತಿಕೆ ಅಂತ ಕಂಡರೂ ಇಂತಹ ವ್ಯಕ್ತಿಗಳಿಂದ ಈ ದೇಶದಲ್ಲಿ, ರಾಜಕೀಯ ವಿಷ ಹಬ್ಬುತ್ತದೆ, ಈ ವಿಷಕ್ಕೆ ಬಹಳ ಜನ ಬಲಿಯಾಗುತ್ತಾರೆ. ಆದರೆ ಈ ಸರ್ಕಾರ ಬಲಿಯಾಗುವುದಿಲ್ಲ.

ಮಾನ್ಯ ಶ್ರೀ ನಾಗೇಗೌಡರ ಸಮಿತಿಯ ವರದಿ ಬಂದ ಮೇಲೆ, ಸಿ.ಬಿ.ಐ. ತನಿಖೆಯ ಬಗ್ಗೆ ಆಮೇಲೆ ಹೇಳುತ್ತೇನೆ. ಏಕೆಂದರೆ ಇದರೊಳಗೆ ತಮಿಳುನಾಡು, ಆಂಧ್ರಪ್ರದೇಶ, ಕರ್ನಾಟಕ ಇದಕ್ಕೆ ಸಂಬಂಧ ಪಟ್ಟ ಎಲ್ಲರೂ, I don't totally deny, ಈ ತರಹ ಒಂದು ಮನಿ ಪವರ್ ಏನಿದೆ, to vitiate politics ಅದಕ್ಕವರು ಪ್ರಯತ್ನ ಮಾಡುತ್ತಿದ್ದರೆ, ಅದನ್ನು ವಿಚಾರಣೆ ಮಾಡುವುದಕ್ಕೆ ಸಿ.ಬಿ.ಐ. ತನಿಖೆಗೆ ಆರ್ಡರ್ ಮಾಡಬೇಕು ಎಂದು ವಾದ ಇದೆ. ಅಂತಹ ಅವಶ್ಯಕತೆ ಬಿದ್ದರೆ ನೋಡೋಣ. ಸದನಕ್ಕೆ ತಿಳಿಸಿಯೇ ಮಾಡುತ್ತೇವೆ. ಈಗ ಮಾತ್ರ ಸರ್ಕಾರದ ವತಿಯಿಂದಲಾಗಲಿ. ಸರ್ಕಾರವನ್ನು ನಡೆಸತಕ್ಕ ಪಕ್ಷದ ವತಿಯಿಂದಲಾಗಲಿ, ಯಾವುದೇ ರೀತಿಯಾಗಿ ಇದಕ್ಕೆ ಸಂಬಂಧ ಇಲ್ಲ, ಇಷ್ಟು ಮಾತ್ರ ನಾನು ಹೇಳುವುದಕ್ಕೆ ಬಯಸುತ್ತೇನೆ.

ಅಧ್ಯಕ್ಷರು : ಗಮನ ಸೆಳೆಯುವ ಸೂಚನೆ ಶ್ರೀ ಎಸ್.ಎ. ರವೀಂದ್ರನಾಥ್ ರವರು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಿಯಮ 237ರ ಕೆಳಗೆ.....

Mr Speaker Give me some time please. ತಮ್ಮ ಸಲಹೆಯನ್ನು ಕೇಳಿದ್ದೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಏನಾದರು ಆಗಬೇಕಲ್ಲ, ನಮಗೆ ಪವರ್ ಇಲ್ಲ ಅಂತ ಹಾಗೇ ಕೂಡುವುದು ಬೇಡ.

(ಗೊಂದಲ)

ಶ್ರೀ ಬಿ. ಮುನಿಯಪ್ಪ : ಮಾನ್ಯ ಅಧ್ಯಕ್ಷರೆ, ನಮ್ಮ ಮಾನ್ಯ ನಿಂಜೇಗೌಡರು ಇದಕ್ಕೆ ಮುಂಚೆ ಮಾತನಾಡೊವಾಗ,

ಅಧ್ಯಕ್ಷರು : ಹೇಳಬೇಡಿ.....

ಶ್ರೀ ಬಿ.ಮುನಿಯಪ್ಪ : ಮದ್ರಾಸ್‌ನಲ್ಲಿ ನಡೆದಂತಹ ಮದುವೆಯ ಬಗ್ಗೆ "ಈ ಸೆಂಚುರಿಯ ವಲ್ನರ್ ಮ್ಯಾರೇಜ್ ಶೋ" ಅಂತ ಹೇಳಿದ್ದಾರೆ. ಅವರ ಪಕ್ಷದ ಮುಖ್ಯಮಂತ್ರಿಗಳು ಅಲ್ಲಿಗೆ ಹೋಗಿದ್ದರು. ಅವರು ಮುಖ್ಯಮಂತ್ರಿಗಳೇ ಅಂತ ಅವರು ಹೇಳಬೇಕು. ಅಮೇಲೆ ಜಮ್ ಗ್ರಾನೈಟ್‌ನವರು 100 ಕೋಟಿ ರೂಪಾಯಿಗಳನ್ನು.....

(ಗೊಂದಲ)

ಶ್ರೀ ಬಿ. ಮುನಿಯಪ್ಪ : ಮಾನ್ಯ ಅಧ್ಯಕ್ಷರೆ, ನಾನು ತಮ್ಮ ಅನುಮತಿಯನ್ನು ಪಡೆದು ಮಾತನಾಡುತ್ತಿದ್ದೇನೆ. ನಾನು ಮಾತನಾಡುವಾಗ ಎಲ್ಲರೂ ಒಟ್ಟಿಗೆ ಎದ್ದುನಿಂತು ಮಾತನಾಡುವುದು ಸರಿಯಲ್ಲ. ನಾವು ಕಿರುಚಿಕೊಳ್ಳುತ್ತೇವೆಂದರೆ ಅದು ನಮ್ಮ ಸಂಸ್ಕೃತಿ ಅಂದರೆ ಕಿರುಚಿ ಕೊಳ್ಳಲಿ ನನಗೆ ಅದರ ಬಗ್ಗೆ ಅಭ್ಯಂತರವಿಲ್ಲ.

ಶ್ರೀ ಜೆ.ವಿ. ಶ್ರೀರಾಮರೆಡ್ಡಿ : ಒಬ್ಬ ಮಾನ್ಯ ಸದಸ್ಯರು ಮಾತನಾಡತಕ್ಕ ಸಂದರ್ಭದಲ್ಲಿ ಈ ತರಹ ಎಲ್ಲರೂ ಒಟ್ಟಿಗೆ ಎದ್ದುನಿಂತು ಮಾತನಾಡುವುದು ಅದು ಸರಿಯಲ್ಲ.

ಶ್ರೀ ಬಿ. ಮುನಿಯಪ್ಪ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಾದ ಹೆಚ್.ಎನ್. ನಂಜೇಗೌಡರು ಗ್ರಾನೈಟ್‌ನವರು ಮದುವೆಗೆ 100 ಕೋಟಿ ರೂಪಾಯಿ ಕೊಟ್ಟಿದ್ದಾರೆಂದು ಹೇಳಿದ್ದಾರೆ. ಅದನ್ನು ಅವರು ದಯವಿಟ್ಟು ಪ್ರೂವ್ ಮಾಡಬೇಕು. ಜವಬ್ದಾರಿ ಸ್ಥಾನದಲ್ಲಿರುವವರು. ಮಂತ್ರಿಗಳಾಗಿದ್ದಂತಹವರು, ಲೋಕಸಭಾ ಸದಸ್ಯರಾಗಿದ್ದವರು, ಅವರು ಪಕ್ಷದ ಮುಖ್ಯಮಂತ್ರಿ ಕೂಡ ಬಂದಿದ್ದಾರೆ ಆ ಮದುವೆಗೆ ಕೇಂದ್ರದ ಸಚಿವರುಗಳು ಬಂದಿದ್ದಾರೆ. ನಮ್ಮ ರಾಜ್ಯದ ಮುಖ್ಯಮಂತ್ರಿಗಳು ಹೋಗಿದ್ದಾರೆ.ಮಾಜಿ ಮುಖ್ಯಮಂತ್ರಿಗಳು ಇಬ್ಬರು ಹೋಗಿದ್ದಾರೆ. ಈ ದೇಶದ ನಾನಾ ಗಣ್ಯವ್ಯಕ್ತಿಗಳು ಬಂದಿದ್ದಾರೆ. ಆದ್ದರಿಂದ 100 ಕೋಟಿ ರೂಪಾಯಿಯನ್ನು ತೆಗೆದುಕೊಂಡಿರುವುದು ಮತ್ತು ಕೊಟ್ಟಿರುವುದನ್ನು ಮಾನ್ಯ ನಂಜೇಗೌಡರು ದಯವಿಟ್ಟು ಅದನ್ನು ನಿರೂಪಿಸಬೇಕು ಈ ಸದನದಲ್ಲಿ ಎಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಲ್.ಆರ್. ಶಿವರಾಮೇಗೌಡ : ಮಾನ್ಯ ಅಧ್ಯಕ್ಷರು ದಯಮಾಡಿ ಇದರ ಬಗ್ಗೆ ಚರ್ಚೆ ಮಾಡಲು ಅವಕಾಶ ಕೊಡಬೇಕು.

ಶ್ರೀ ಬಿ. ಮುನಿಯಪ್ಪ : 100 ಕೋಟಿ ರೂಪಾಯಿ ತೆಗೆದುಕೊಂಡಿರುವ ಬಗ್ಗೆ. ಅದರ ಬಗ್ಗೆ ಅವರು ಹೇಳಬೇಕು.

ಶ್ರೀ ಹೆಚ್.ಎನ್. ನಂಜೇಗೌಡ : ಮಾನ್ಯ ಅಧ್ಯಕ್ಷರೆ, ನಾನು ಮೊದಲೇ ಹೇಳಿದೆ, ಈ ದೇಶದಲ್ಲಿ ರೂಲ್ ಆಫ್ ಲಾ ಇಲ್ಲ, ಲಾ ಆಫ್ ಜಂಗಲ್ ಎಂದು ಹೇಳಿ. ಫೋನ್‌ಗೆ ದುಡ್ಡು ಕಟ್ಟಿದರೆ ಇನ್‌ಕಂಟ್ಯಾಕ್ಸ್‌ನವರು ಬರುತ್ತಾರೆ ದುಡ್ಡು ಎಲ್ಲಿಂದ ಬಂತು ಎಂದು. ನಾನು ಒಂದು ಕಾರಿಗೆ ಬುಕ್ ಮಾಡಿದೆ. ಕಾರಿಗೆ ದುಡ್ಡು ಎಲ್ಲಿಂದ ಬಂತು ಎಂದು ನನಗೆ ಎನ್‌ಕ್ವಾಯರಿ. ಈ ದೇಶದಲ್ಲಿ ರೂಲ್ ಆಫ್ ಲಾ ಇದ್ದರೆ ಇನ್‌ಕಂಟ್ಯಾಕ್ಸ್‌ನವರು ಕತ್ತೆ ಕಾಯುತ್ತಾರೋ ಎನ್ನುವುದು ಒಂದು ಪ್ರಶ್ನೆ. 100 ಕೋಟಿ ಅಲ್ಲಿ ಖರ್ಚಾಗಿದೆ. ಇವರು ಹೇಗೆ ಕೊಟ್ಟರು ಹೇಗೆ ಮಾಡಿದರು ಎನ್ನುವುದನ್ನು ಸಾಬೀತು ಮಾಡುವುದಕ್ಕೆ ಸಿಬಿಐ ತನಿಖೆಗೆ ನಾನು ಪ್ರಾರ್ಥನೆ ಮಾಡಿದ್ದುದು. ಮಾಡಿಸಿ ಮಾನ್ಯ ಮುನಿಯಪ್ಪನವರೇ ಅವರಿಗಾದರೂ ಹೇಳಿ ಸಿಬಿಐ ತನಿಖೆಗೆ ಏರ್ಪಡಿಸಿಯಮ್ಮ ಅಂತ ಆಗ ನಾವು ಪ್ರೂವ್ ಮಾಡುತ್ತೇವೆ

(ಗೊಂದಲ)

ಶ್ರೀ ಬಿ. ಮುನಿಯಪ್ಪ : ಮಾನ್ಯ ಅಧ್ಯಕ್ಷರೆ, ಈ ಸದನದಲ್ಲಿ ಇಲ್ಲದ ವ್ಯಕ್ತಿಯ ಬಗ್ಗೆ ಮಾತನಾಡಬೇಕಾದರೆ ಈಗ ಇವರು ಗಾಜಿನ ಮನೆಯಲ್ಲಿ ಕುಳಿತುಕೊಂಡು ಕಟ್ಟಡಕ್ಕೆ ಕಲ್ಲು ಹೊಡೆಯುವಂತಹ ಕೆಲಸವನ್ನು ಮಾಡಿದ್ದಾರೆ. ಮಾನ್ಯ ನಂಜೇಗೌಡರು 100 ಕೋಟಿ ರೂಪಾಯಿಯನ್ನು ಯಾರು ಕೊಟ್ಟರು, ಯಾವಾಗ ಕೊಟ್ಟರು ಎನ್ನುವುದನ್ನು ಹೇಳಲಿ ಸಿಬಿಐ ತನಿಖೆ ಮಾಡಿದರೆ ನೀವು ಏನು ಸಹಾಯ ಮಾಡಬೇಕಾಗಿಲ್ಲ. ಮಾನ್ಯ ನಂಜೇಗೌಡರು ನಮ್ಮ ನಾಯಕಿಯವರ ಸಹಾಯಕ್ಕೆ ಹೋಗುವ ಅವಶ್ಯಕತೆಯಿಲ್ಲ. ಅವರು ಅವರನ್ನು ಕಾಪಾಡಿ ಕೊಳ್ಳುವುದಕ್ಕೆ ಗೊತ್ತು, ಅವರು ರಾಜಕೀಯ

ಮಾಡುವುದಕ್ಕೂ ಗೊತ್ತು. 100 ಕೋಟಿ ರೂಪಾಯಿಗಳನ್ನು ಮಾನ್ಯ ನಂಜೇಗೌಡರ ಸಮ್ಮುಖದಲ್ಲಿ ಇವರೇ ಏನಾದರೂ ಕೊಡಿಸಿದ್ದರೆ ಸಭೆಗೆ ಹೇಳಲಿ.

ಶ್ರೀ ಯು.ಆರ್. ಸಭಾಪತಿ : ಮಾನ್ಯ ಅಧ್ಯಕ್ಷರೆ, ಪ್ರತಿ ಸಲ ಬಿಜೆಪಿಯವರು ಅರೋಪ ಮಾಡುವಾಗ 100 ಕೋಟಿ 100 ಕೋಟಿ ಎಂದು ಹೇಳುತ್ತಿರುತ್ತಾರೆ. ಈ ನೂರು ಕೋಟಿಗೂ ಈ ಬಿಜೆಪಿಗೂ ಏನು ಸಂಬಂಧ ಎಂದು ಅವರು ಹೇಳಬೇಕು. ಅದನ್ನು ಅವರು ತಿಳಿಸಬೇಕು.

(ಗೊಂದಲ)

ಶ್ರೀ ಜೆ.ಹೆಚ್. ಪಟೇಲ್ : ಮಾನ್ಯ ಅಧ್ಯಕ್ಷರೆ, ಬೇರೆ ರಾಜ್ಯದ ಮುಖ್ಯಮಂತ್ರಿಗಳು ಅವರು ಈ ಸದನದ ಸದಸ್ಯರಲ್ಲ. ಆದ್ದರಿಂದ ಯಾರದೇ ಹೆಸರು ಪ್ರಸ್ತಾಪ ಮಾಡುವುದು ಬೇಡ. ಆದರೆ ಮಾನ್ಯ ಸದಸ್ಯರು ಯಾವ ಹಿನ್ನೆಲೆಯಲ್ಲಿ ಹೇಳಿದರು ಅದಲ್ಲ ನಾನು ಹೇಳುತ್ತಿರುವುದು ಆದರೂ ಅವರು ಈ ಸದನದ ಸದಸ್ಯರಲ್ಲದಿರುವುದರಿಂದ ಆ ಹೆಸರನ್ನು ಕಡತದಿಂದ ದಯವಿಟ್ಟು ತೆಗೆಸಿರಿ.

ಅಧ್ಯಕ್ಷರು : ರೆಕಾರ್ಡ್ಸ್ ತರಿಸಿ ನೋಡಿ ತೆಗೆದು ಹಾಕಿಸುತ್ತೇನೆ.

ಶ್ರೀ ಜೆ.ಹೆಚ್. ಪಟೇಲ್ : ಇಲ್ಲಿ ಸದನದಲ್ಲಿ ಇಲ್ಲದಿರತಕ್ಕವರು ಬೇರೆ ರಾಜ್ಯದ ಮುಖ್ಯಮಂತ್ರಿಗಳ ಬಗ್ಗೆ ಪ್ರಸ್ತಾಪ ಬೇಡ. ಅದು ರೆಕಾರ್ಡ್‌ಗೆ ಹೋಗುವುದು ಬೇಡ.

ಅಧ್ಯಕ್ಷರು : ಆಯಿತು.

ಶ್ರೀ ಎಂ. ಶ್ರೀನಿವಾಸ್ : ಮಾನ್ಯ ನಂಜೇಗೌಡರು ಆ ರಾಜ್ಯದ ಮುಖ್ಯಮಂತ್ರಿ ಹೆಸರು ಎತ್ತಿಲ್ಲ.

ಶ್ರೀ ಬಿ. ಮುನಿಯಪ್ಪ : ಮಾನ್ಯ ನಂಜೇಗೌಡರು ಈ ಸಭೆಯಲ್ಲಿ ಇಲ್ಲದೇ ಇರುವವರ ಬಗ್ಗೆ ಮಾತನಾಡಿದ್ದಾರೆ. ದಯವಿಟ್ಟು ಕಡತ ತರಿಸಿ ಹೇಳಬೇಕು.

(ಗೊಂದಲ)

ಶ್ರೀ ಬಿ. ಮುನಿಯಪ್ಪ : ಮಾನ್ಯ ಅಧ್ಯಕ್ಷರೆ, ಇವರು ಈ ರೀತಿ ಕಿರುಚಿಕೊಂಡರೆ ಒಳ್ಳೆಯ ಶಾಸಕರಾಗುವುದಿಲ್ಲ. ಇವರು ಎಲ್ಲೋ ಶಾಸಕರಾಗಿ ಬಂದಿದ್ದಾರೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ನನ್ನದೊಂದು ಕ್ರಿಯಾಲೋಪ ಇದೆ.

(ಗೊಂದಲ)

ಶ್ರೀ ಚಂದ್ರಕಾಂತ್ ಜಿ. ಬೆಲ್ಲದ : ಈ ಸದನದ ಸದಸ್ಯರಾಗಿರುವವರು ಜನತೆಗೆ ಮಾದರಿಯಾಗಿರಬೇಕು.

ಶ್ರೀ ಎಸ್.ಆರ್. ಲಕ್ಷ್ಮಯ್ಯ : ಈ ದೇಶದಲ್ಲ ಮಾದರಿ ಇನ್ನಾರೂ ಇಲ್ಲ, ಇವರೊಬ್ಬರೇ?

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಮುನಿಯಪ್ಪನವರು ತಮ್ಮ ಪಕ್ಷದ ನಾಯಕರನ್ನು ಅವರ ಬಗ್ಗೆ, ಅವರ ಪರವಾಗಿ ಮಾತನಾಡುವುದಕ್ಕೆ ಯಾರೂ ಅಡ್ಡಿ ಮಾಡಿಲ್ಲ. ಆದರೆ ಅವರು ಆವೇಶದ ಭರದಲ್ಲಿ ಇರಬೇಕಾದವರು ಗೆದ್ದಿದ್ದೀರಿ ಎಂದು ಹೇಳಿದರು. ಈ ಪದ ಅನ್ನುವುದಾದರೆ ಇದು ತಾವು ಇದಕ್ಕೆ ಅವಕಾಶ ಕೊಡುತ್ತೀರಾ? ಇದು ಸ್ವಲ್ಪ ತೀರ್ಮಾನ ಆಗಬೇಕು, ಇಲ್ಲದಿದ್ದರೆ ಸರಿಯಾಗುವುದಿಲ್ಲ, ಇದು ತೀರ್ಮಾನವಾಗಬೇಕು.

ಅಧ್ಯಕ್ಷರು : ಮಾನ್ಯ ವಾಟಾಳ್ ನಾಗರಾಜ್‌ರವರೆ, ಎಲ್ಲರೂ ಕುಳಿತುಕೊಳ್ಳಬೇಕು. ಮಾನ್ಯ ಬಸವರಾಜ್ ಮತ್ತು ನಿಮ್ಮಲ್ಲಿ ಒಂದು ಪ್ರಶ್ನೆ ಕೇಳಬೇಕೆಂದು ಇದ್ದೇನೆ. ನೀವು 40 ಜನ ಆರಿಸಿ ಬಂದಿದ್ದೀರಿ. ಅವರು ಒಬ್ಬರು ಆರಿಸಿ ಬಂದಿದ್ದಾರೆ. ನಿಮ್ಮ ಅಭಿಪ್ರಾಯ ವ್ಯಕ್ತಮಾಡುವುದಕ್ಕೆ ನಿಮಗೆ ಎಷ್ಟು ಅರ್ಹತೆ ಹಕ್ಕು ನೀವು ಸಂಪಾದನೆ ಮಾಡಿಕೊಂಡಿದ್ದೀರೋ ಅಷ್ಟೇ ಹಕ್ಕು ಅವರಿಗೂ ಇರುತ್ತದೆ. ನಿಮ್ಮ ಮುಖಂಡರು ಮಾತನಾಡುವಾಗ ಅವರ ಪಕ್ಷದ ಮುಖಂಡರಿಗೆ ಅನ್ವಯಿಸುವ ಹಾಗೆ ಒಂದು ಮಾತನ್ನು ಹೇಳಿದ್ದರಿಂದ ಅದಕ್ಕೆ ಅವರು ಸಮರ್ಥನೆ ಮಾಡಿಕೊಳ್ಳುವುದಕ್ಕೆ ಹೇಳುತ್ತಾರೆ. ಏನು ಯುದ್ಧ ಮಾಡುತ್ತೀರಾ ಇಲ್ಲಿ? ಮಾತು ಮಾತಿಗೂ ನಿಮ್ಮ ನಿಮ್ಮಲ್ಲಿ, No. This is Parliamentary democracy. You have a very talented leader with you. ಅತ್ಯಂತ ಗೌರವಾಂಗಿ, ಬಹಳ ಗಂಭೀರವಾದಂತಹ ವಿಚಾರವನ್ನು ತಮ್ಮದೇ ಆದ ಶೈಲಿಯಲ್ಲಿ ಅವರು ಪ್ರತಿಪಾದನೆ ಮಾಡಿದ್ದಾರೆ. ಅದಕ್ಕೆ ಅವರು ಏನೋ ಉತ್ತರ ಹೇಳುತ್ತಿದ್ದಾರೆ. ಈ ಸದನದ ಒಂದು ಚರ್ಚೆಯ ಮಟ್ಟವನ್ನು ಮೇಲಕ್ಕೆ ಹೆಚ್ಚಿಸೋಣವೆಂದರೆ ನೀವು ಕುಸ್ತಿಗೆ ಇಳಿಯುತ್ತೀರಲ್ಲ, ಹಾಗಾದರೆ ಒಂದು ಕೆಲಸ ಮಾಡಿ, ನೀವೇ ಹೇಳಿಬಿಡಿ, ಯಾರ್ಯಾರು ಮಾತನಾಡಬೇಕು ಯಾರ್ಯಾರು ಮಾಡನಾಡಬಾರದು ಅಂತ, ನಾನು ಏಕಿರಬೇಕು ಇಲ್ಲಿ? ತಾವಾಗಿಯೇ ತಾವು ತಿಳಿದುಕೊಳ್ಳುತ್ತೀರಿ ಎಂದು ಸುಮ್ಮನೆ ಬಹಳ ಹೊತ್ತಿನಿಂದ ಕುಳಿತಿದ್ದೆ.

ಉದ್ವೇಗದ ಭರದಲ್ಲಿ ಯಾರು ಏನೇ ಮಾತನಾಡಿದರೂ ಕೂಡ ಈ ಸದನದ ಗೌರವಕ್ಕೆ ಮತ್ತು ಸಂಪ್ರದಾಯಕ್ಕೆ ವಿರುದ್ಧವಾಗಿರತಕ್ಕ ಮಾತುಗಳು ಯಾವುದೇ ಅಲ್ಲಿದ್ದರೂ ಕೂಡ ನಾನು ಕಾಳಜಿ ವಹಿಸಿ ಅದನ್ನು ಕಡಿತದಿಂದ ತೆಗೆಯತಕ್ಕ ಕ್ರಮವನ್ನು ತೆಗೆದುಕೊಳ್ಳುತ್ತೇನೆ. ಇದನ್ನು ಇಲ್ಲಿಗೆ ಮುಕ್ತಾಯ ಮಾಡಿ.

ಗಮನ ಸೆಳೆಯುವ ಸೂಚನೆಗಳು.

(1) ಭದ್ರಾ ಬಲದಂಡೆ ಕಾಲುವೆಯ ದುರಸ್ಥಿ

ಶ್ರೀ ಎಸ್.ಎ. ರವೀಂದ್ರನಾಥ್ : ಮಾನ್ಯ ಅಧ್ಯಕ್ಷರೆ, ಭದ್ರಾ ಬಲದಂಡೆ ಕಾಲುವೆಯ ದುರಸ್ಥಿ ಕೆಲಸ ನಿಧಾನವಾಗುತ್ತಿರುವುದರಿಂದ ರೈತರಿಗೆ ಉಂಟಾಗುವ ತೊಂದರೆಯ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಜೆ.ಹೆಚ್. ಪಟೇಲ್ (ಉಪ ಮುಖ್ಯಮಂತ್ರಿ) : ಮಾನ್ಯ ಸಭಾಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳ ಪರವಾಗಿ ಈ ಕೆಳಕಂಡ ಲಿಖಿತ ಹೇಳಿಕೆಯನ್ನು ನೀಡುತ್ತೇನೆ.

ಭದ್ರಾ ಅಣೆಕಟ್ಟಿನ ಬಳಿ ಕುಸಿದು ಬಿದ್ದ ಬಲದಂಡೆ ಕಾಲುವೆಯ ಗೈಡ್‌ವಾಲ್ ದುರಸ್ಥಿ ಕಾಮಗಾರಿಯ ಅಂಗವಾದ ಪುನರ್ ನಿರ್ಮಾಣ ಕಾರ್ಯವನ್ನು ಈಗ ಕೈಗೆತ್ತಿಕೊಳ್ಳಲಾಗಿದ್ದು, ಫೆಬ್ರವರಿ 1996ಕ್ಕೆ ಕಾರ್ಯವನ್ನು ಪೂರ್ಣಗೊಳಿಸಲು ಕಾರ್ಯಕ್ರಮ ರೂಪಿಸಲಾಗಿದೆ. ಸದರಿ ಕಾಮಗಾರಿಗೆ ಈಗ ಹಾಗೂ ಇತರೆ ಸಾಮಗ್ರಿಗಳ ದಾಸ್ತಾನು ಇದ್ದು ಸದರಿ ಸಾಮಗ್ರಿಗಳ ಕೊರತೆ ಇರುವುದಿಲ್ಲ, ಆದರೆ ಪುನರ್ ನಿರ್ಮಾಣ ರೂಪಿಸಲಾದ ಕಾರ್ಯಕ್ರಮದ ಅನ್ವಯ ಜೂನ್ 95ರಿಂದ ಸೆಪ್ಟೆಂಬರ್ 95ರ ಅವಧಿಯ ಮಳೆಗಾಲದ ಅವಧಿಯಾಗಿರುವುದರಿಂದ ಈ ಅವಧಿಯಲ್ಲಿ ಕಾಮಗಾರಿಯ ಪ್ರಗತಿಯ ನಿಧಾನಗತಿಯಲ್ಲಿ ಸಾಗಿದೆಯೇ ಹೊರತು ಸಿಮೆಂಟ್ ಹಾಗೂ ಇತರೆ ಸಾಮಗ್ರಿಗಳ ಕೊರತೆಯಿಂದಲ್ಲ.